
ಮಕ್ಕಳ ವಿಭಾಗ

## ಪಂಚತಂತ್ರ ಕಥೆ

### ನಗಾರಿಗೆ ಹೆದರಿದ ನರಿ



ಒಂದು ಕಾಡು. ಅಲ್ಲೊಂದು ನರಿ. ಅದರ ಹೆಸರು ಗೋಮಾಯ. ಅದಕ್ಕೆ ಒಂದು ದಿನ ಹಸಿವೆಯಾಯಿತು. ಬಳಲಿ ಬಳಲಿ ಅದರ ಗಂಟಲು ಒಣಗಿ ಹೋಯಿತು. ಅದು ನಿರಾಶೆಯಿಂದ ಅತ್ತಿತ್ತ ಸುತ್ತಾಡುತ್ತಿತ್ತು. ಕೊನೆಗೆ ಒಂದು ರಣರಂಗಕ್ಕೆ ಬಂದಿತು. ಆಗ ಕಾಳ ರಾತ್ರಿ ಎರಡು ಸೈನ್ಯಗಳು ಅಲ್ಲಿ ಹೋರಾಡಿ ಬೇಕಾದಷ್ಟು ಹೆಣಗಳು ಬಿದ್ದಿದ್ದವು. ನಿರ್ಜನವಾದ ಆ ಭಯಾನಕ ಸ್ಥಳದಲ್ಲಿ ನಗಾರಿಯೊಂದು ಒಂದು ಕಡೆ ಬಿದ್ದಿತ್ತು. ಅದು ನರಿಯ ಕಣ್ಣಿಗೆ ಬಿತ್ತು. ಅಷ್ಟರಲ್ಲಿ ಸುಯ್ಯನೆ ಗಾಳಿ ಬೀಸಿತು.

ಗಾಳಿ ಬೀಸಿದಾಗ ಅದರಿಂದ ಧ್ವನಿ ಹೊರಟಿತು. ನರಿಯು ಆ ಧ್ವನಿಯನ್ನು ಕೇಳಿ ಹೆದರಿ, "ಅಯ್ಯೋ, ಸತ್ತೆ, ಸತ್ತೆ; ಇನ್ನು ಇಲ್ಲಿಂದ ತಪ್ಪಿಸಿಕೊಳ್ಳಬೇಕು" ಎಂದು ಒದ್ದಾಡತೊಡಗಿತು. ಆದರೆ ಮರುಕ್ಷಣವೇ ಅದಕ್ಕೊಂದು ವಿಚಾರ ಹೊಳೆಯಿತು – "ಇಲ್ಲಿ ನನ್ನ ತಾತ ಮುತ್ತಾತಂದಿರೆಲ್ಲ ವಾಸಿಸಿದ್ದರು. ಬರೀ ಸ್ವಲ್ಪ ಭಯವಾಯಿತು ಎಂದು ಇಂತಹ ಒಳ್ಳೆಯ ಸ್ಥಳವನ್ನು ದುಡುಕಿ ಬಿಟ್ಟುಕೊಡುವುದು ಸರಿಯಲ್ಲ."

ಅದಕ್ಕೆ ಕಾರಣವನ್ನು ಆಲೋಚನೆ ಮಾಡಿ ಹೀಗೆ ಕಂಡುಕೊಂಡಿತು:

**ಭಯೇ ವಾ ಯದಿ ವಾ ಹರ್ಷೇ ಸಂಪ್ರಾಪ್ತೇ ಯೋ ವಿಮರ್ಶಯೇತ್ ।**
**ಕೃತ್ಯಂ ನ ಕುರುತೇ ವೇಗಾತ್ ಸ ನ ಸಂತಾಪಮಾಪ್ನುಯಾತ್ ॥**

(ಒಮ್ಮೊಮ್ಮೆ ಭಯ, ಮತ್ತೊಮ್ಮೆ ಸಂತೋಷ ಆಗುತ್ತಲೇ ಇರುತ್ತದೆ. ಆದರೆ ಈ ಎರಡೂ ಸಂದರ್ಭಗಳಲ್ಲಿ ಚೆನ್ನಾಗಿ ವಿಮರ್ಶೆ ಮಾಡಿ ನಿರ್ಧಾರಕ್ಕೆ ಬರಬೇಕು. ಹೀಗೆ ಮಾಡಿ, ಅವಸರ ಪಡದೆ ನಡೆದುಕೊಳ್ಳುವವನಿಗೆ ಚಿಂತೆ ಇರುವುದಿಲ್ಲ.)

ಹೀಗೆ ಚಿಂತಿಸಿ, ಆ ನರಿ ಮೆಲ್ಲಗೆ ಹೆಜ್ಜೆ ಹಾಕುತ್ತ ಆ ನಗಾರಿಯ ಹತ್ತಿರ ಬಂದಿತು. ಅದೇನು ಎಂದು ಚೆನ್ನಾಗಿ ಪರೀಕ್ಷಿಸಿ ನೋಡಿತು. ನಗಾರಿಯ ಮೇಲೆ ಚಾಚಿಕೊಂಡಿದ್ದ ಮರದ ರೆಂಬೆ ಗಾಳಿಗೆ ಬಂದು ಬಡಿಯುತ್ತಿತ್ತು. ಅದರಿಂದಲೇ ಇಷ್ಟು ಶಬ್ದವಾಗುತ್ತಿದ್ದುದು. ಇದನ್ನು ಕಂಡು ತನ್ನ ಮೂಢತನಕ್ಕೆ ಅದಕ್ಕೆ ನಗು ಬಂತು. " ಇಷ್ಟೇನಾ! ಸುಮ್ಮನೆ ಶಬ್ದಕ್ಕೆ ಹೆದರಿ ನನ್ನ ಜಾಗವನ್ನು ಬಿಟ್ಟು ಹೋಗುತ್ತಿದ್ದೆನಲ್ಲಾ!" ಎಂದು ಮನಸ್ಸಿನಲ್ಲಿಯೆ ಅಂದುಕೊಂಡಿತು.

ಪಂಚ ಮಾತೆಯರು:

**ಹೆತ್ತ ತಾಯಿ**

ಮಕ್ಕಳೇ, ನೀವು ಗೌರವದಿಂದ ಕಾಣಬೇಕಾದ ಐದು ತಾಯಿಯರ ಬಗ್ಗೆ ಈ ತಿಂಗಳಿನಿಂದ ತಿಳಿದುಕೊಳ್ಳುತ್ತೀರಿ. ಅವರಲ್ಲಿ ಮೊದಲನೆಯವಳು ನಿಮಗೆ ಜನ್ಮಕೊಟ್ಟ ತಾಯಿ. ಉಪನಿಷತ್ತುಗಳು 'ಮಾತೃದೇವೋ ಭವ' (ತಾಯಿಯನ್ನು ದೇವರಂತೆ ಕಾಣು) ಎನ್ನುತ್ತವೆ. ಗಾದೆ ಮಾತೊಂದು 'ತಾಯಿಗಿಂತ ದೇವರಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎನ್ನುತ್ತದೆ. ಶಂಕರಾಚಾರ್ಯರು, 'ಕೆಟ್ಟ ಮಗ ಹುಟ್ಟಬಹುದು, ಆದರೆ ಕೆಟ್ಟ ತಾಯಿ ಎಂದಿಗೂ ಹುಟ್ಟುವುದಿಲ್ಲ' ಎನ್ನುತ್ತಾರೆ. 'ತಾಯಿಯ ಮನಸ್ಸನ್ನು ನೋಯಿಸಿದರೆ ಕೆಡುಕಾಗುತ್ತದೆ' ಎನ್ನುತ್ತಾರೆ ಶ್ರೀರಾಮಕೃಷ್ಣರು. ನಮ್ಮನ್ನು ಈ ಜಗತ್ತಿಗೆ ತಂದವಳು, ನಮ್ಮ ಲಾಲನೆ–ಪಾಲನೆ ಮಾಡಿದವಳು ನಮ್ಮ ಅಮ್ಮ. ಅವಳೇ ನಮ್ಮ ಮೊದಲ ಗುರು ಕೂಡ. ಶ್ರೀರಾಮಕೃಷ್ಣರು, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು ತಮ್ಮ ತಾಯಂದಿರ ಸೇವೆಯನ್ನು ಕಡೆಯವರೆಗೂ ಮಾಡಿದರು. ಆದ್ದರಿಂದ ನೀವೂ ನಿಮ್ಮ ಅಮ್ಮನನ್ನು ಗೌರವದಿಂದ ಕಾಣಿರಿ, ಅವಳಿಗೆ ದಿನವೂ ನಮಸ್ಕಾರ ಮಾಡಿ, ಅವಳ ಮನಸ್ಸಿಗೆ ಯಾವತ್ತೂ ನೋವು ಉಂಟಾಗದಂತೆ ನಡೆದುಕೊಳ್ಳಿ. **(ಮುಂದಿನ ತಿಂಗಳು: ಭೂತಾಯಿ)**

## ನರೇಂದ್ರನಿಂದ ಕಲಿಯಬೇಕಾದ ಪಾಠಗಳು
## ಏಕಾಗ್ರತೆ



ನರೇಂದ್ರ ಎನ್ನುವುದು ಸ್ವಾಮಿ ವಿವೇಕಾನಂದರ ಬಾಲ್ಯದ ಹೆಸರು. ನರೇಂದ್ರ ಆಟದ ಹೆಸರಿನಲ್ಲಿ ಯಾವಾಗಲೂ ಧ್ಯಾನ ಮಾಡುತ್ತಿದ್ದ. ಒಂದು ದಿನ ಅವನು ಈ ಧ್ಯಾನದ ಆಟದಲ್ಲಿ ಹುಡುಗರನ್ನೂ ಸೇರಿಕೊಂಡಿದ್ದ. ಸಂಜೆಗತ್ತಲು, ಹುಡುಗರೆಲ್ಲ ಧ್ಯಾನನಿರತರಾಗಿದ್ದರು. ಆದರೆ ಕೆಲವು ಹುಡುಗರು ಮಧ್ಯಮಧ್ಯ ಅರೆಗಣ್ಣು ತೆರೆದು ಇತರರು ಹೇಗೆ ಧ್ಯಾನ ಮಾಡುತ್ತಿದ್ದಾರೆ ಎನ್ನುವುದನ್ನು ಕದ್ದು ನೋಡುತ್ತಿದ್ದರು. ಆ ಹೊತ್ತಿಗೆ ಅಲ್ಲೊಂದು ದೊಡ್ಡ ಸರ್ಪ ಚಪ್ಪಡಿ ಹಾಸಿದ ನೆಲದ ಮೇಲೆ ಹರಿದಾಡಿ ಕೊಂಡು ಬಂತು. ಒಬ್ಬ ಹುಡುಗ ಅದನ್ನು ನೋಡಿಬಿಟ್ಟ. ನೋಡಿದವನೇ, "ಅಯ್ಯೋ, ಹಾವು, ಹಾವು!" ಎಂದು ಗಟ್ಟಿಯಾಗಿ ಕಿರುಚಿಕೊಂಡ. ಮರುಕ್ಷಣವೇ ಹುಡುಗರೆಲ್ಲ ದಡಬಡ ಎದ್ದು ಪರಾರಿ. ಆದರೆ ನರೇಂದ್ರ ಮಾತ್ರ ಗಾಢಧ್ಯಾನದಲ್ಲಿ ಕುಳಿತೇ ಇದ್ದ. ಹುಡುಗರೆಲ್ಲ ನರೇಂದ್ರನನ್ನು ದೂರದಿಂದಲೇ ಗಟ್ಟಿಯಾಗಿ ಕೂಗಿ ಕರೆದರು. ಆದರೆ ಅವನು ಮಿಸುಕಾಡಲೇ ಇಲ್ಲ. ಹುಡುಗರು ಓಡಿಹೋಗಿ ನರೇಂದ್ರನ ತಾಯ್ತಂದೆಯರಿಗೆ ಸುದ್ದಿ ತಿಳಿಸಿದರು. ಅವರು ಗಾಬರಿಯಾಗಿ ಓಡಿಬಂದು ನೋಡುತ್ತಾರೆ– ಎದೆ ನಡುಗಿಸುವ ದೃಶ್ಯ! ಆ ಹಾವು ತನ್ನ ಹೆಡೆ ಬಿಚ್ಚಿಕೊಂಡು ಒಳ್ಳೇ ಠೀವಿಯಿಂದ ನೋಡುತ್ತಿದೆ! ಏನು ಮಾಡುವುದೀಗ? ಆ ಕಡೆ ನರೇಂದ್ರನಿಗೋ ಬಾಹ್ಯಪ್ರಜ್ಞೆಯೇ ಇದ್ದಂತಿಲ್ಲ. ಈ ಕಡೆ ಹಾವೋ ಹೆಡೆಬಿಚ್ಚಿಕೊಂಡು ನಿಂತಿದೆ! ಅದನ್ನು ಓಡಿಸೋಣವೆಂದರೆ ಇವರೇ ಭಯದಿಂದ ತಲ್ಲಣಿಸುತ್ತಿದ್ದಾರೆ. ಆದರೆ ಅದೃಷ್ಟವಶಾತ್ ಅದು ತಾನಾಗಿಯೇ ಹೊರಟು ಹೋಯಿತು. ತಾಯ್ತಂದೆಯರು ನರೇಂದ್ರನನ್ನು ಕೇಳಿದರು. "ಅಲ್ಲವೋ, ಹಾವು ಬಂತು ಅಂತ ಗಟ್ಟಿಯಾಗಿ ಕೂಗಿದರೂ ನೀನೇಕೆ ಎದ್ದು ಬರದೆ ಅಲ್ಲೇ ಕುಳಿತಿದ್ದೆ?" ಅದಕ್ಕೆ ಅವನೆಂದ, "ಏನು! ಹಾವು ಬಂದಿತ್ತೆ? ನನಗೆ ಹಾವು ಬಂದದ್ದು ಗೊತ್ತಾಗಲಿಲ್ಲ. ನನ್ನಷ್ಟಕ್ಕೆ ನಾನು ತುಂಬ ಆನಂದದಿಂದಿದ್ದೆ."

**ನೀತಿ: ನಾವು ನಮ್ಮೆಲ್ಲ ಕೆಲಸಗಳನ್ನೂ, ಅಧ್ಯಯನವನ್ನೂ ಏಕಾಗ್ರತೆಯಿಂದ ಮಾಡಬೇಕು. ಏಕಾಗ್ರತೆಯೇ ವಿದ್ಯಾಭ್ಯಾಸದ ಮೂಲ.**

*(ಮುಂದಿನ ತಿಂಗಳ ಕತೆ 'ಧೈರ್ಯ' ದ ಬಗ್ಗೆ )*

## ಸಂಸ್ಕೃತಿ ಪರಿಚಯ
## ಸಂಸ್ಕೃತಿ ಎಂದರೇನು?

ಒಳ್ಳೆಯ ಸಂಸ್ಕಾರವನ್ನು ಪಡೆದ ವ್ಯಕ್ತಿ ಸುಸಂಸ್ಕೃತನು. ಇವನಲ್ಲಿನ ಗುಣಸಂಪತ್ತು ಸಂಸ್ಕೃತಿ. ಇಂಗ್ಲಿಷಿನಲ್ಲಿ culture ಎಂಬ ಪದದ ಅರ್ಥ ಗೌರವಿಸು, ಸೇವಿಸು, ನಿಷ್ಠೆಯಿಂದಿರು ಎಂದು. ಸಂಸ್ಕಾರದಿಂದ ಸಂಸ್ಕೃತಿ. 'ಸಂಸ್ಕಾರ' ಅಥವಾ ' ಸಂಸ್ಕರಣ' ಎಂದರೆ ಸಮ್ಯಕ್ ಕರಣ — ಸಮ್ಯಕ್ ಕೃತಿ — ಸಂಸ್ಕೃತಿ. ಹಾಗೆಂದರೆ ಚೆನ್ನಾಗಿ ಮಾಡುವುದು. ಒಳ್ಳೆಯದನ್ನಾಗಿಸುವುದು, ಶುದ್ಧಿ ಮಾಡಿ ಉತ್ತಮಪಡಿಸುವುದು ಎಂದರ್ಥ. ಈ ಬಗೆಯ ಹಿತವಾದುದನ್ನು, ಒಳ್ಳೆಯದನ್ನು ತಂದುಕೊಳ್ಳುವ ಬಗೆ, ಹುಡುಕಾಟ, ವಿಧಾನವನ್ನೇ ನಾವು ಸಂಸ್ಕೃತಿ ಎಂದು ಕರೆಯುವುದು. ಇದು ಸಂಸ್ಕೃತಿಯ ಬಗ್ಗೆ ಡಿ.ವಿ.ಜಿ. ಕೊಡುವ ಸೊಗಸಾದ ನಿರೂಪಣೆ. ಒಂದು ರಾಷ್ಟ್ರದ ಸಂಸ್ಕೃತಿ ಎಂದರೆ, ಆ ರಾಷ್ಟ್ರದ ವ್ಯಕ್ತಿಗಳ ಒಟ್ಟು ಸಂಸ್ಕೃತಿ. ಈ ಸಂಸ್ಕೃತಿಯ ಏಕತೆಯೆ ಅದನ್ನು ರಾಷ್ಟ್ರವಾಗಿಸಿರುವುದು. ಹಾಗೂ ಇದಕ್ಕೆ ಆ ರಾಷ್ಟ್ರದ ಇತಿಹಾಸದ ಹಿನ್ನೆಲೆ ಇರುತ್ತದೆ. ಇತಿಹಾಸ ಆ ಸಂಸ್ಕೃತಿಯನ್ನು ಹಲವು ಕಠಿಣ ಪರಿಸ್ಥಿತಿಗಳಿಗೆ ಒಡ್ಡುತ್ತದೆ. ಅದರಲ್ಲಿ ಜಯಿಸಿದರೆ ಆ ಸಂಸ್ಕೃತಿ ಉಳಿಯುತ್ತದೆ. ಇಲ್ಲದಿದ್ದರೆ ಅಳಿಯುತ್ತದೆ. ನಾವು ಮಾನವ ಜನಾಂಗದಲ್ಲಿ ನಶಿಸಿಹೋದ ಅನೇಕ ಸಂಸ್ಕೃತಿಗಳನ್ನು ಕಾಣುತ್ತೇವೆ. ಈಜಿಪ್ಟ್, ಮೆಸಪಟೋಮಿಯಾ, ಗ್ರೀಕ್, ರೋಮನ್ ಇಂತಹವುಗಳಲ್ಲಿ ಪ್ರಮುಖವಾದುವು. ವೇದಕಾಲದಿಂದ ಹಿಡಿದು ಇಂದಿನವರೆಗೂ ಆಚರಣೆ ವಿಧಾನಗಳಲ್ಲಿ ಎಷ್ಟೋ ಪರಿವರ್ತನೆ ಹೊಂದಿದ್ದರೂ, ಇಂದಿಗೂ ಉಳಿದುಕೊಂಡು ಬಂದಿರುವ ಸಂಸ್ಕೃತಿ ಎಂದರೆ ಭಾರತೀಯ ಸಂಸ್ಕೃತಿ. ಹಲವಾರು ವಿದೇಶಿ ಸಂಸ್ಕೃತಿಗಳು ಭಾರತಕ್ಕೆ ಬಂದರೂ, ಅವುಗಳೆಲ್ಲವನ್ನೂ ಅದಗಿಸಿಕೊಂಡಿರುವುದು ಅದರ ವೈಶಿಷ್ಟ್ಯ.

**(ಮುಂದಿನ ತಿಂಗಳು: *ಭಾರತೀಯ ಸಂಸ್ಕೃತಿಯ ಲಕ್ಷಣಗಳು*)**